
## ವಿಶಾಂಕೇ




ನಟನಾಗಿ, ನಿರ್ದೇಶಕನಾಗಿ, ನಟನೆಯ ಮೇಷ್ಟ್ರಾಗಿ, ಕಥೆಗಾರರಾಗಿ ಪರಿಚಿತರಾಗಿರುವ ಮೌನೇಶ ಬಡಿಗೇರ ಅವರ ನಾಟಕ 'ವಿಶಾಂಕೇ'. ಹಲವು ವರ್ಷಗಳ ಹಿಂದೆಯೇ ರಚಿತವಾಗಿ, ರಂಗಪ್ರದರ್ಶನವನ್ನೂ ಕಂಡಿದ್ದ ಈ ನಾಟಕ ಈಗ ಪುಸ್ತಕವಾಗಿ ಪ್ರಕಟವಾಗಿದೆ. ಅವರ ರಂಗಾನುಭವ ಮತ್ತು ಸೃಜನಶೀಲ ಸಾಹಿತ್ಯದ ರಚನೆಯ ಅನುಭವಗಳೆರಡೂ ಈ ನಾಟಕದಲ್ಲಿ ಮೇಳೈಸಿವೆ. ಅವರೇ ಹೇಳಿಕೊಂಡ ಹಾಗೆ ಇದೊಂದು ಸಮಕಾಲೀನ ಸಾಮಾಜಿಕ ಅಸಂಗತ ಪ್ರಹಸನ.

'ವಿಶಾಂಕೇ' ಎಂಬುದು 'ವಿಧ್ವಂಸಕ ಶಾಂತಿ ಕೇಂದ್ರ' ಎಂಬುದರ ಹ್ರಸ್ವರೂಪ. ಈ ಹೆಸರೇ ನಾಟಕದ ವಸ್ತುವನ್ನೂ ಧ್ವನಿಸುವಂತಿದೆ. ವಿಧ್ವಂಸಕತೆಯನ್ನೇ ತುಂಬಿಕೊಂಡಿರುವ ಪರಿಸರದಲ್ಲಿ ಶಾಂತಿಗಾಗಿ ಅರಸುವುದು ಇಂದಿನ ಮಹಾನಗರದ ಮಧ್ಯಮವರ್ಗದ ಬಹುತೇಕರ ಪಾಡು. ಈ ಪಾಡನ್ನು ನಾಟಕೀಯವಾಗಿ ಕಟ್ಟಿಕೊಡಲು ನಾಟಕ ಪ್ರಯತ್ನಿಸುತ್ತದೆ. ಹಿಂಸೆಯ ಮೂಲಕವೇ ಹಿಂಸೆಯನ್ನು ತಣಿಸುತ್ತೇವೆ ಎನ್ನುವ ಪ್ರಳಯನ್ ನಂಜುಂಡ ಅವನಂಥವರು ಬೆಳವಣಿಗೆಗೆ ತಮ್ಮನ್ನೇ ಆಹಾರವಾಗಿ ಉಣಿಸುತ್ತ ನಾಶಗೊಳ್ಳುವ ಮನೋಜನಂಥವರು, ನಂಜುಂಡನಂಥವರ ಕೈಯಲ್ಲಿ ದಾಳವಾಗಿ, ಕೊನೆಗೆ ಅವರು ಮಾಡಿದ ಪಾಪಕ್ಕೆ ಬಲಿಯಾಗುವ ಮೂರ್ತಿಯಂಥ ಅಮಾಯಕರು ಹುಟ್ಟಿಸುವ ತಲ್ಲಣಗಳು ಮನಸಲ್ಲಿ ಬಹುಕಾಲ ಉಳಿಯುವಂಥವು. ಓದಿಗಿಂತ ಪ್ರದರ್ಶನದಲ್ಲಿಯೇ ಹೆಚ್ಚಿನ ಸಾಧ್ಯತೆಯನ್ನು ಹೊಂದಿರುವಂತೆ ತೋರುವ ನಾಟಕವಿದು.

**ವಿಶಾಂಕೇ; ಲೇ: ಮೌನೇಶ ಬಡಿಗೇರ; ಬೆ: ₹ 120; ಪ್ರ: ಥಿಯೇಟರ್ ತತ್ಕಾಲ್ ಬುಕ್ಸ್; ದೂ: 9901234161**

---

## ಬಾವಿಗ್ಯಾನವ ಮರೆತು




'ಹಿತ್ತಿಲ ಬಾವಿಯನ್ನು/ ಪಾಳು–ಬೋಳು– ಬಂಜೆಯೆಂದು ಜರಿದವರಿಗೆ/ ಜಂಗುಜೇಡು ಜೇಡಬಾವಲಿ ದಾಟಿ/ ಅದರೊಳಗೆ ದೃಷ್ಟಿ ಇಳಿಸದವರಿಗೆ/ ಅಮ್ಮ ಹಾರಿಕೊಂಡೇ ತೋರಿಸಬೇಕಾಯಿತು.../ ಪಾತಾಳದಲ್ಲಿದ್ದ ಮುಳುಗುವಷ್ಟೇ ನೀರನ್ನು/ ನೀರನ್ನಷ್ಟೇ ಕುಡಿಸಿ ಬದುಕಿಸಿದವಳಿಗೆ/ ನೀರು ಕುಡಿಸಿತು ಬಾವಿ' – ಬಹುಕಾಲ ಮನಕಚ್ಚಿ ಉಳಿಯುವ ತಲ್ಲಣ ಎಬ್ಬಿಸಬಲ್ಲ ಇಂಥ ತೀಕ್ಷ್ಣ ಚಿತ್ರಗಳನ್ನು ಕಟ್ಟಿಕೊಡಬಲ್ಲ ಇಂದ್ರಕುಮಾರ್ ಕಥೆಗಾರ, ಕಾದಂಬರಿಕಾರರಾಗಿ ಓದುಗರಿಗೆ ಪರಿಚಿತರು. 'ಒಳಗೊಂದು ವಿಲಕ್ಷಣ ಮಿಶ್ರಣ'ದ ಮೂಲಕ ಕಾವ್ಯ ಪ್ರಪಂಚದಲ್ಲಿ ಸಂಚಾರದ ಲೈಸನ್ಸ್ ಪಡೆದುಕೊಂಡಿರುವ ಅವರ ಎರಡನೇ ಕವನ ಸಂಕಲನವಿದು.

ತಮ್ಮ ಕತೆಗಳಲ್ಲಿ ಕಾವ್ಯಗುಣವನ್ನು ಅಲ್ಲಲ್ಲಿ ಕಾಣಿಸುವ ಇಂದ್ರಕುಮಾರ್ ಕಾವ್ಯಲೋಕಕ್ಕೆ ಇಣುಕಿದರೆ ಕಥನಗುಣ ಎದ್ದು ಕಾಣುತ್ತವೆ. ಇಲ್ಲಿನ ಒಂದೊಂದು ಕವಿತೆಯ ಹಿಂದೆಯೂ ಕಥೆಯೊಂದು ಹೊರಗಿಣುಕಲು ಕಾದಂತಿದೆ. ತುಸು ಸಮಾಧಾನದಿಂದ ಒಳಬಿಟ್ಟುಕೊಂಡರೆ ತಮ್ಮ ಕಥೆಯನ್ನು ಅವು ಹೇಳಿಕೊಳ್ಳುತ್ತವೆ, ತುಸು ವಾಚಾಳಿತನದಿಂದಲೇ!

'ಚಿಲ್ಲರೆಗಳ ಚೌಕಾಶಿ' ಎಂಬ ಪದ್ಯದ ಪ್ರಾರಂಭದ ಸಾಲುಗಳು ಹೀಗಿವೆ: 'ಕೊಡುವುದಿದೆ/ ಬಹಳ/ ಬಾಕಿ/ ಉಳಿದೇ ಬಿಟ್ಟಿವೆ ಬಹಳಷ್ಟು/ ನನ್ನ ಬಳಿಯೇ'. ಕಾವ್ಯ ಇನ್ನೂ ಇಂದ್ರಕುಮಾರ್ ಅವರ ಬಳಿ ಬಾಕಿ ಇದೆ, ಮತ್ತದು ಕಾವ್ಯವೇ ಆಗಿ ಬರೆಯಬೇಕಾದ ಅಭಿವ್ಯಕ್ತಿಯ ಸವಾಲೂ.

**ಬಾವಿಗ್ಯಾನವ ಮರೆತು; ಲೇ: ಇಂದ್ರಕುಮಾರ್ ಎಚ್.ಬಿ.; ಬೆಲೆ: ₹100;**
**ಪ್ರ: ಇಂಪನಾ ಪುಸ್ತಕ; ದೂ: 9986465530**